d) What is the amount of loss incurred by KS & DL so far ?

e) Who are responsible for the perpetual loss of KS & DL and what is the action taken on them while the Company was earning profit upto 1980 (1990).

Sri S. Bangarappa (Chief Minister)) :-

a) Yes.

b) Details enclosed.

c) The percentage of production by KS & DL is indicated below :-

Soap	22.78%
Detergents	30.09%
Fatty acids	30.63%
Sandalwood Oil	7.63%
Glycerine	7.33%
Staric acid	16.67%

d) Rs. 6,370.07 Lakhs loss incurred as on 30-9-1990.

e) KS & DL has been incurring losses since 1980. However, the quantum of losses has been increased only after commissioning of Soap Expansion project during 1984-85. Government have constituted a One Man Judicial Commission headed by Justice P S. Mahendra (Retd.) to enquire into the losses and other irregularities in connection with the implementation of soap expansion project. The Commission has been functioning since 3-9-1990. Persons responsible for the losses could be determined only after completion of the enquiry. Action will be taken as per the rules after receipt of the enquiry report.

Sl.No.	Name of the Company	Products manufactured	Amount of Contract received by KS & DL
1.	M/s. Ballarpur Industries Ltd. Ballarpur, Maharashtra	Detergent powder	Rs. 1,50,00,000.00
2.	M/s. Richardson Hindustan (India) Ltd., Bombay	Clearasil Toilet Soaps	Rs. 1,47,93,444.00
3.	Balmer Lawrie & Co. (A Government of India undertaking), Madras	Hydrogenerated fatty acid Flake	Rs. 3,54,694.00
4.	M/s. Deepan Products, Bangalore	Acid Slurry (Sulphonicacid)	Rs. 69,685.00
		Total :	Rs. 3,02,17,823.00

ವಿಷಯ :- ರೇಷ್ಮೆ ಮಾರುಕಟ್ಟೆಯ ಫೀಜನ್ನು ಪುರಸಭೆಗೆ ಒದಗಿಸುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 499 (1198)

ಮಾನ್ಯ ರೇಷ್ಮೆ ಖಾತೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರೇಷ್ಮೆ ಮಾರುಕಟ್ಟೆಗಳಲ್ಲಿ ಫೀಜನ್ನು ವಿಧಿಸಲು ಪ್ರಾರಂಭಿಸಿದ ಮೇಲೆ ರಾಮನಗರ ಮಾರುಕಟ್ಟೆ ಒಂದರಲ್ಲಿ ಈ ತನಕ ವಸೂಲಿಯಾಗಿರುವ ಮಾರುಕಟ್ಟೆ ಶುಲ್ಕವೆಷ್ಟು ?

ಆ) ಇದನ್ನು ಯಾವ ಬಾಬಿಗೆ ಖರ್ಚು ಮಾಡಲಾಗಿದೆ.?

ಇ) ರಾಮನಗರ ಪಟ್ಟಣವೊಂದರಲ್ಲೇ ಸುಮಾರು 20 ಫಿಲೇಚರ್‌ಗಳಿದ್ದು ಈವರೆಗೆ ವಸೂಲಿಗಾರರು ಕೋಟ್ಯಾಂತರ ರೂಪಾಯಿ ಮಾರುಕಟ್ಟೆ ಶುಲ್ಕದಲ್ಲಿ ಈ ಪಟ್ಟಣದ ನೈರ್ಮಲ್ಯಕ್ಕೆ ಅರ್ಧದಷ್ಟನ್ನಾದರೂ ಪುರಸಭೆಗೆ ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

ಶ್ರೀ ವಿ. ಮುನಿಯಪ್ಪ (ರೇಷ್ಮೆ ರಾಜ್ಯ ಸಚಿವರು) :–

ಅ) ರಾಮನಗರ ಮಾರುಕಟ್ಟೆಯಲ್ಲಿ 1971–72 ರಿಂದ 1990–91ರ ನವೆಂಬರ್ ಅಂತ್ಯದ ವರೆಗೆ ವಸೂಲಾಗಿರುವ ಮಾರುಕಟ್ಟೆ ಶುಲ್ಕ 9.65 ಕೋಟಿ ರೂಪಾಯಿಗಳು.

ಆ) ಕರ್ನಾಟಕ ರೇಷ್ಮೆ ಹುಳುವಿನ ಬಿತ್ತನೆ ಗೂಡು ಮತ್ತು ರೇಷ್ಮೆ ನೂಲು (ಉತ್ಪಾದನೆ,ಸರಬರಾಜು, ಹಂಚಿಕೆ ಮತ್ತು ಮಾರಾಟ ನಿಯಂತ್ರಣ) ಕಾಯಿದೆ 1959 ರ ಪ್ರಕಾರ ರೇಷ್ಮೆ ಗೂಡು ಹಾಗೂ ರೇಷ್ಮೆ ನೂಲಿನ ಬೆಲೆ ಸ್ಥಿರೀಕರಿಸಲು, ರೇಷ್ಮೆ ಬಿತ್ತನೆ ಗೂಡು, ನೂಲು ಬಿಚ್ಚಾಣಿಕೆ ಹುರಿ ಮಾಡುವ ಕಾರ್ಯಕ್ರಮಗಳನ್ನು ಅಭಿವೃದ್ಧಿ ಪಡಿಸಲು ಹಾಗೂ ರೇಷ್ಮೆ ಅಭಿವೃದ್ಧಿಗೆ ಸಂಬಂಧಿಸಿದ ಈ ಕೆಳಕಂಡ ಕಾರ್ಯಕ್ರಮಗಳಿಗೂ ಕೂಡಾ ಈ ಹಣವನ್ನು ವೆಚ್ಚ ಮಾಡಬಹುದು.

1) ರೇಷ್ಮೆ ಗೂಡಿನ ಮಾರುಕಟ್ಟೆ ಮತ್ತು ರೇಷ್ಮೆ ವಿನಿಮಯ ಕೇಂದ್ರಗಳ ಕಟ್ಟಡ ನಿರ್ಮಾಣಕ್ಕೆ.

2) ರೇಷ್ಮೆ ಗೂಡಿನ ಮಾರುಕಟ್ಟೆ ಮತ್ತು ರೇಷ್ಮೆ ವಿನಿಮಯ ಕೇಂದ್ರಗಳಲ್ಲಿ ಅಗತ್ಯ ಸೌಲಭ್ಯಗಳನ್ನು ಒದಗಿಸಲು.

3) ರೇಷ್ಮೆ ನೂಲಿಗೆ ನಿಧಿಪ್ರಾಧಿಕಾರದಿಂದ ಆಗಿಂದಾಗ್ಗೆ ತನಿಖೆಗೆ ನಿಗದಿಪಡಿಸಲು ಮತ್ತು,

4) ರೇಷ್ಮೆ ಬಿತ್ತನೆ, ಗೂಡು ಮತ್ತು ರೇಷ್ಮೆ ನೂಲನ್ನು ಪರೀಕ್ಷಿಸಲು ಮತ್ತು ವರ್ಗೀಕರಿಸಲು ಉಪಯೋಗಿಸಬಹುದು.

ಇ) ಇಲ್ಲ.

ವಿಷಯ :– ಬನಶಂಕರಿ 3 ನೇ ಹಂತದ ಈಸ್ಟ್ ಆಫ್ ಕತ್ತರಿಗುಪ್ಪೆಯ ಬಡಾವಣೆ ಅಭಿವೃದ್ಧಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 500 (1097)

ಶ್ರೀ ರಾಮಲಿಂಗಾರೆಡ್ಡಿ (ಜಯನಗರ) :– ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರಿನ ಬನಶಂಕರಿ 3 ನೇ ಹಂತದ ಈಸ್ಟ್ ಆಫ್ ಕತ್ತರಿಗುಪೆಯ ಬಡಾವಣೆಯನ್ನು 1977 ನೇ ಸಾಲಿನಲ್ಲೇ ನಿರ್ಮಿಸಿದ್ದರೂ ಅಲ್ಲಿನ ರಸ್ತೆಗಳಿಗೆ ಇದುವರೆವಿಗೂ ಟಾರು ಹಾಕದಿರುವುದರಿಂದ ಅಲ್ಲಿನ ನಿವಾಸಿಗಳಿಗೆ ತೊಂದರೆಗಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಸದರಿ ಬಡಾವಣೆಯಲ್ಲಿರುವ ಚರಂಡಿಯನ್ನು ಮುಚ್ಚದಿರುವುದರಿಂದ ದುರ್ವಾಸನೆ ಬಂದು ಅದರ ಅಕ್ಕಪಕ್ಕದಲ್ಲಿ ಕಳ್ಳಿಯ ಪೊದೆಗಳು ಬೆಳೆದು ಹಾವು ಮತ್ತು ಇತರೆ ಕ್ರಿಮಿಕೀಟಗಳು ಜಾಸ್ತಿಯಾಗಿ ಅಲ್ಲಿನ ನಿವಾಸಿಗಳಿಗೆ ತೊಂದರೆಯಾಗುತ್ತಿರುವುದು ನಿಜವಲ್ಲವೇ ?

ಇ) ಹಾಗಿದ್ದಲ್ಲಿ ಈ ಬಡಾವಣೆಗೆ ಟಾರನ್ನು ಹಾಗೂ ಚರಂಡಿಯನ್ನು ಚಪ್ಪಡಿಗಳ ಮುಖೇನ ಮುಚ್ಚುವ ಕೆಲಸವನ್ನು ಕೂಡಲೇ ಸರ್ಕಾರದವರು ಮಾಡಿಸುವರೇ ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :–

ಅ) ಮನೆಗಳು ನಿರ್ಮಾಣವಾಗಿರುವ ರಸ್ತೆಗೆ ಟಾರನ್ನು ಹಾಕಲಾಗಿದೆ. ಇನ್ನು ಉಳಿದಿರುವ ರಸ್ತೆಗಳಿಗೆ ಟಾರನ್ನು ಹಾಕುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಆ) ಚರಂಡಿಗಳನ್ನು ಮುಟ್ಟಿಲ್ಲವೆನ್ನುವುದು ನಿಜವಲ್ಲ. ಈಗಿರುವ ಚರಂಡಿಗಳನ್ನು ಈಗಾಗಲೇ ಕಲ್ಲು ಚಪ್ಪಡಿಗಳಿಂದ ಮುಚ್ಚಲಾಗಿದೆ.

ಇ) ಶೀಘ್ರದಲ್ಲಿಯೇ ಸೂಕ್ತ ಕ್ರಮ ಕೈಕೊಳ್ಳಲಾಗುವುದು.